ಪೂರೈಸುತ್ತವೆ ಎಂಬ ಭರವಸೆ ಇರುವುದಿಲ್ಲ. ಆದರೆ, ತಪಸ್ಸು ಮಾಡಿ ದೇವರಿಂದ ನೇರ ವರ ಪಡೆದರೆ ನಮ್ಮ ಇಷ್ಟಾರ್ಥಗಳು ಖಚಿತವಾಗಿ ಸಿದ್ಧಿಸಬಹುದು ಎಂಬ ಕಾರಣದಿಂದ ನನಗೆ ತಪಸ್ಸು ಮಾಡುವ ಹಂಬಲ ಉಂಟಾಗುತ್ತಿದೆ.

ಈ ಹಿಂದೆ ಅನೇಕರು ತಪಸ್ಸು ಮಾಡಿ ದೇವರಿಂದ ವರ ಪಡೆದ ಹಲವಾರು ಉದಾಹರಣೆಗಳನ್ನು ನಾವು ಕೇಳಿದ್ದೇವೆ, ಓದಿದ್ದೇವೆ. ತಪಸ್ಸಿಗೆ ಮೆಚ್ಚಿ ದೇವರು ಪ್ರತ್ಯಕ್ಷನಾಗಿ, ‘ಏನು ವರ ಬೇಕು ಕೇಳು’ ಎನ್ನಲಾಗಿ ಹಲವಾರು ರೀತಿಯ ವರ ಪಡೆದು ಹಲವರು ಧನ್ಯರಾಗಿದ್ದಾರೆ. ಮಹಾಭಾರತದ ಅರ್ಜುನ, ಶ್ರೀಕೃಷ್ಣನ ಸೂಚನೆಯಂತೆ ಘೋರ ತಪಸ್ಸು ಮಾಡಿ ಶಿವನಿಂದ ಪಾಶುಪತಾಸ್ತ್ರವನ್ನು ಪಡೆದನಲ್ಲವೇ. ಪರಶುರಾಮ ತನ್ನ ತಾಯಿಗಾಗಿ ತಪಸ್ಸು ಮಾಡಿ ವಿಷ್ಣುವಿನಿಂದ ಕೊಡಲಿ ಎಂಬ ಅಸ್ತ್ರವನ್ನು ಪಡೆದನು, ಹಿರಣ್ಯಕಶ್ಯಪ ತಪಸ್ಸು ಮಾಡಿ ತನಗೆ ಯಾವುದೇ ರೀತಿಯ ಸಾವು ಬರದಂತೆ ಬ್ರಹ್ಮನಿಂದ ವರ ಪಡೆದನು. ಗಿರಿಜೆ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡಳು. ರಾವಣ ಕೈಲಾಸದಲ್ಲಿ ತಪಸ್ಸು ಮಾಡಿ ಶಿವ ಮತ್ತು ಬ್ರಹ್ಮರಿಂದ ಅಮರತ್ವದ ವರ ಪಡೆದನು, ಅವನ ತಪಸ್ಸು ಅವನ ಭಕ್ತಿ ಶಕ್ತಿಯ ಸಂಕೇತವಾಗಿದೆ. ಭಕ್ತ ಪ್ರಹ್ಲಾದ, ಮಾರ್ಕಂಡೇಯ ಇನ್ನೂ ಅನೇಕರು ತಪಸ್ಸು ಮಾಡಿ ದೇವರನ್ನು ಒಲಿಸಿಕೊಂಡರು. ದೇವರಿಂದ ವರ ಪಡೆದ ಕೆಲವರು ದೇವರನ್ನೇ ಯಾಮಾರಿಸಿ ಅವರಿಗೆ ಕಂಟಕರಾದಾಗ ದೇವರು ತಾವು ನೀಡಿದ ವರವನ್ನೇ ವಾಮಮಾರ್ಗದಿಂದ ವಿಫಲಗೊಳಿಸಿ ಅಂಥವರನ್ನು ಸಂಹರಿಸಿದ್ದುಂಟು. ಭಸ್ಮಾಸುರ ಅದಕ್ಕೊಂದು ಒಳ್ಳೆಯ ಉದಾಹರಣೆ, ಅನೇಕ ಋಷಿಮುನಿಗಳು ತಪಸ್ಸು ಮಾಡಿ ದೇವರಿಂದ ಶಕ್ತಿಯನ್ನು ಪಡೆದು ಅವರೇ ಹಲವರಿಗೆ ವರ ನೀಡಿ, ಇನ್ನು ಕೆಲವರಿಗೆ ಶಾಪ ನೀಡಿದ್ದು ಕೂಡ ನಮ್ಮ ಪುರಾಣ ಪುಣ್ಯಕಥೆಗಳಲ್ಲಿ ಕಂಡು ಬರುತ್ತದೆ. ಸಿದ್ಧಿ ಪುರುಷರು, ಅವತಾರ ಪುರುಷರು ತಮ್ಮ ತಪೋಬಲದಿಂದ ವರ ಪಡೆದು ಕೆಲವರು ಜನರ ಕಷ್ಟ- ಕಾರ್ಪಣ್ಯಗಳ ನಿವಾರಣೆಗೆ ಸ್ಪಂದಿಸಿದರೆ, ಇನ್ನೂ ಕೆಲವರು ವಾಸಿಯಾಗದ ರೋಗಗಳಿಂದ ಜನರನ್ನು ಮುಕ್ತಗೊಳಿಸಿದ ಬಗ್ಗೆ, ಕೆಲವರು ಸತ್ತವರನ್ನು ಬದುಕಿಸಿದ ಕಥೆಗಳನ್ನು ಕೇಳುತ್ತೇವೆ. ಅಸಾಧ್ಯವಾದುದನ್ನು, ಅಸಂಭವವೆನಿಸುವುದನ್ನು ಸಾಧ್ಯ ಮಾಡಿ ತೋರಿಸಿದ ಮಹನೀಯರ ಕುರಿತು, ದೇವಮಾನವರ ಕುರಿತು ಕೇಳಿದ್ದೇವೆ. ಕೆಲವು ಮಹಿಮರ ಇಂಥ ಮಹಿಮೆಯನ್ನು ಕೇಳಿ ನಾವು ಅಂಥವರಿಗೆ ಅಡ್ಡ ಬಿದ್ದಿದ್ದೇವೆ. ಅಂತಹ ದೇವರು, ದೇವಮಾನವರ ಸುಕ್ಷೇತ್ರಗಳಿಗೆ ಜನ ಎಡೆಬಿಡದೆ ಭಕ್ತಿ ಪೂರ್ವಕವಾಗಿ ನೇಮ, ನಿಷ್ಠೆಯಿಂದ ಈಗಲೂ ಹೋಗಿಬರುವುದು, ಕಪ್ಪಕಾಣಿಕೆ ಅರ್ಪಿಸುವುದು ನಡೆಯುತ್ತಲೇ ಇರುತ್ತದೆ. ಇಂಥವರ ಕಪ್ಪ ಕಾಣಿಕೆಯಿಂದ ದೇವರ ಹುಂಡಿಗಳು ದಿನಾಲು ತುಂಬಿ ತುಳುಕುವುದುಂಟು. ಒಂದೊಂದು ದೇವರಿಗೆ ಒಂದೊಂದು ವಾರ, ತಿಥಿ, ನಕ್ಷತ್ರಗಳನ್ನು ಗೊತ್ತು ಮಾಡಿ ಆಯಾ ದಿನಗಳಂದು ಶ್ರದ್ಧೆ, ಭಕ್ತಿಯಿಂದ ಆಯಾ ದೇವರಿಗೆ ವಿಶೇಷ ಪೂಜೆ ಪುನಸ್ಕಾರ, ತರತರದ ನೈವೇದ್ಯಗಳು ಉಪವಾಸ ವ್ರತಗಳು ಮತ್ತು ಜಾತ್ರೆ, ರಥೋತ್ಸವಗಳ ಮೂಲಕ ದೇವರನ್ನು ಒಲಿಸಿಕೊಳ್ಳಲು ಮುಂದಾಗುವ ಕ್ರಮ ಎಲ್ಲ ಕಡೆ ಇದ್ದೇ ಇದೆ ಅಲ್ಲವೇ?.



ಇಂತಹ ಭಕ್ತಿ, ಪೂಜೆ, ಪುನಸ್ಕಾರ, ತೀರ್ಥಯಾತ್ರೆ, ಕಾಣಿಕೆ, ಅನನ್ಯ ಭಕ್ತಿಭಾವ ತೋರಿಸುವವರಿಗೆ ಆಗಲಿ ಅಥವಾ ಯಾವುದೇ ಮೂರ್ತ ಸ್ವರೂಪವನ್ನು ಆರೋಪಿಸದೇ ಕೇವಲ ನಿರಾಕಾರ ದೇವರಿಗೆ ನಿತ್ಯ ಹಲವು ಸಾರಿ ಪ್ರಾರ್ಥನೆ ಸಲ್ಲಿಸುವ ಬೇರೆಬೇರೆ ಮತ, ಪಂಥಗಳ ಅನುಯಾಯಿಗಳಿಗೆ ಅವರ ಪ್ರಾರ್ಥನೆ ಅಥವಾ ಪರಿಪರಿಯ ಬೇಡಿಕೆ, ಕೂಗಿಗೆ, ಅಹವಾಲುಗಳಿಗೆ ದೇವರು ಸ್ಪಂದಿಸುತ್ತಿರುವನೇ? ಇಲ್ಲವೇ ಒಂದೂ ತಿಳಿಯುವುದಿಲ್ಲ. ಏಕೆಂದರೆ ಜನರ